ಹೊರದೇಶಗಳಿಗೆ ಕಳುಹಿಸುವುದಕ್ಕೆ ನೀವು ಏನಾದರೂ ಬ್ಯಾನ್ ಹಾಕಿದ್ದೀರಾ ? ಬ್ಯಾನ್ ಹಾಕಿದ್ದರೂ ಕಳ್ಳತನದಿಂದ ನಡೆಯುತ್ತಿರುವ ವ್ಯವಹಾರವನ್ನು ತಡೆಗಟ್ಟುವುದಕ್ಕೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮಗಳೇನು ?

೧೦–೪೫ ಎ. ಎಂ.

ಕಳ್ಳತನದಲ್ಲಿ ಇವೊತ್ತು ಕಲ್ಲು ಹೋಗುತ್ತಿದೆ. ಇದನ್ನು ನಿಲ್ಲಿಸುವುದಕ್ಕೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮ ಏನು ? ಈಗಾಗಲೇ ಮಂಗಳೂರಿನ ಹಡಗು ಕಟ್ಟೆಯಲ್ಲಿ ಸಾಕಷ್ಟು ಸಂಖ್ಯೆಯ ಕೋಟ್ಯಾಂತರ ರೂಪಾಯಿಗಳ ದಾಸ್ತಾನು ಇದೆ. ಅದನ್ನು ಏನು ಮಾಡುತ್ತೀರಿ ?

ಶ್ರೀ ಬಿ. ಶಿವಣ್ಣ.—ಈಗಾಗಲೇ ನಾನು ಹೇಳಿದ್ದೇನೆ. ಲಿಬರಲೈಸ್ ಪಾಲಿಸಿ ಏನು ಆಗಿದೆ ಅಂದರೆ ರಾಕ್ ಬ್ಲಾಕ್ ಅನ್ನು ಮೆಟೀರಿಯಲ್ ಆಗಿ ಕಳಿಸಿದ್ದೇವೆ. ಹೊರಗಡೆ ಕಳಿಸಿರುವುದರಿಂದ ಫಾರೀನ್ ಎಕ್ಸ್‌ಛೇಂಜ್ ಹೆಚ್ಚು ಬರುತ್ತಿದೆ....

ಶ್ರೀ ಎಂ. ಪಿ. ವೆಂಕಟೇಶ್.—ಉತ್ತರ ಹೇಳಿ....

ಶ್ರೀ ಬಿ. ಶಿವಣ್ಣ.—ಈ ರೀತಿ ನೀವು ನಾಟಕ ಮಾಡುವುದು ಸರಿಯಲ್ಲ.....

ಶ್ರೀ ಎಂ ಪಿ. ವೆಂಕಟೇಶ್.—ಈ ತರಹ ನೀವು ನಾಟಕ ಬಯಲು ಮಾಡಿದ್ದೀರಿ. ಶುದ್ಧವಾಗಿ ಇರಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ವೆಂಕಟೇಶ್‌ರವರೇ, ನೀವು ಪ್ರಶ್ನೆ ಕೇಳುವುದಕ್ಕೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ನೀವು ಪ್ರತ್ಯೇಕವಾಗಿ ಬರೆದುಕೊಟ್ಟರೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಶಿವಣ್ಣ —ಈಗ ರಾ ಮೆಟೀರಿಯಲ್ಸ್ ಆಗಲಿ, ಹಾಗೂ ಕಲ್ಲು ಹೊರಗಡೆ ಹೋಗದ ಹಾಗೆ ಬ್ಯಾನ್ ಮಾಡಿದ್ದೇನೆ. ಅವ್ಯವಹಾರ ನಡೆದಿದೆ ಎಂದು ಬ್ಯಾನ್ ಮಾಡಿದ್ದೇವೆ.

ಅಧ್ಯಕ್ಷರು.—ಅದನ್ನು ನೀವು ಬ್ಯಾನ್ ಮಾಡಿದ್ದೀರಾ ?

ಶ್ರೀ ವಾಟಾಳ್ ನಾಗರಾಜ್.—ತಾವು ಮಂಗಳೂರಿಗೆ ಬಂದರೆ ತಮಗೆ ಗೊತ್ತಾಗುತ್ತದೆ. ಪ್ರತಿ ದಿವಸ ೧೮೦ ಲಾರಿ ಲೋಡ್ ಹೋಗುತ್ತಿದೆ. ಕಳ್ಳತನ ನಿಲ್ಲುವುದಿಲ್ಲ.....

ಶ್ರೀ ಎಲ್. ಆರ್. ಶಿವರಾಮೇಗೌಡ.—ಬೆಂಗಳೂರು ಪೆದ್ದಾರಿಯಲ್ಲಿ ನಾನು ಇದ್ದೇನೆ. ಪ್ರತಿ ದಿನ ನೂರು ಲಾರಿ ಲೋಡ್ ಹೋಗುತ್ತಿದೆ, ಅದನ್ನು ತಡೆಗಟ್ಟಬೇಕು.

ಅಧ್ಯಕ್ಷರು. – ಈಗ ಪ್ರಶ್ನೋತ್ತರ ಕಾಲ ಮುಗಿಯಿತು.....

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಬಿ. ಶಿವಣ್ಣ,—ಮಾನ್ಯ ಅಧ್ಯಕ್ಷರೇ, ದಿನಾಂಕ ೮–೬–೯೦ರ ಲಿಖಿತ ಮೂಲಕ ಉತ್ತರಿಸುವ ಹಿನೇ ಪಟ್ಟಿಯಲ್ಲಿನ ೨೨ ಪ್ರಶ್ನೆಗಳನ್ನು, ಪ್ರಶ್ನೆ ಸಂಖ್ಯೆ ೨೭೩, ೨೯೩, ೨೯೫, ೨೯೭, ೨೨೪, ೩೪೨ ಹಾಗೂ ೨೨೪ ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ ೧೫ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರಿನ ಬನಶಂಕರಿಯಲ್ಲಿರುವ ಮದ್ಯಪಾನ ಅಂಗಡಿಗಳು ಹಾಗೂ ಬಾರ್‌ಗಳ ಸಂಖ್ಯೆ

೨೭೬. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಬನಶಂಕರಿ ಒಂದನೇ ಹಂತದಲ್ಲಿರುವ ೮೦ ಅಡಿ ರಸ್ತೆಯಲ್ಲಿ ಶ್ರೀನಿವಾಸನಗರ ಟರ್ನಿಂಗ್ (ತಿರುವು) ನಿಂದ ಹಿಡಿದು ಬನಶಂಕರಿ ಒಂದನೇ ಹಂತದ (ಮೈಸೂರು ಬ್ಯಾಂಕ್ ಕಾಲೋನಿ) ಬಸ್ ನಿಲ್ದಾಣದವರೆಗೆ ಇರತಕ್ಕ ವೈನ್‌ಶಾಪ್‌ಗಳು ಬಾರ್ ಅಂಡ್ ರೆಸ್ಟೋರೆಂಟ್‌ಗಳು ಮತ್ತು ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು ? ಅವು ಯಾವುವು

ಆ) ಈ ಎಲ್ಲಾ ಅಂಗಡಿಗಳಿಗೂ ಹಾಗೂ ಬಾರ್‌ಗಳಿಗೂ ಸಕ್ರಮವಾಗಿ ಲೈಸೆನ್ಸ್, ನಿಯಮಗಳಿಗೆ ಅನುಗುಣವಾಗಿ ಲೈಸನ್ಸ್ ಪಡೆದಿವೆಯೆ ?